‘ಯಲ್ಲಾ… ಯಲ್ಲಾ ತೂ ರೆಹನ್‌ಕರ್ ಯಾ ಮಾಲಿಕ್’ ಎಂದು ಕೂಗುತ್ತಿದ್ದ ಕೂಗನ್ನು ಕೇಳಿದ ಆ ಬೀದಿಯ ನಿವಾಸಿಗಳು ಅವನಿಗೆ ತೋಚಿದಷ್ಟು ಕಾಸು ಕೊಡುತ್ತಿದ್ದರು. ಆ ಹೊತ್ತಿಗಾಗಲೇ ರಾಬರ್ಟ್ ಲೂಯಿ ಸ್ಟೀವನ್‌ಸನ್‌ನ ಪ್ರಖ್ಯಾತ ‘ಟ್ರೆಷರ್ ಐಲೆಂಡ್’ ಕಾದಂಬರಿ ‘ದ್ರವ್ಯದ್ವೀಪ’ ಎಂದು ಅನುವಾದವಾಗಿತ್ತು. ಅದರಲ್ಲಿ ಪ್ಯೂ ಎಂಬ ಕುಂಟು ನಾವಿಕನ ಪ್ರಸ್ತಾಪವಿದೆ. ಅವನೂ ಸಹ ಹೀಗೆಯೇ ಊರುಗೋಲಿನ ಸಹಾಯದಿಂದ ನಡೆಯುತ್ತಿದ್ದ, ಭಯ ಉಂಟು ಮಾಡುತ್ತಿದ್ದ. ಇದು ಎಳೆತನದಲ್ಲಿ ಓದಿದ ಕಾದಂಬರಿಯ ಪಾತ್ರದ ಪ್ರಭಾವ!

ಬೆಂಗಳೂರಿನ ಆನಂದ್‌ರಾವ್ ಸರ್ಕಲ್ಲಿನಲ್ಲಿದ್ದುದೇ ನಮ್ಮ ‘ಹೆವನ್ಲಿ ಅಬೋಡ್’ ಅರ್ಥಾತ್ ಮಾಡರ್ನ್ ಹಿಂದೂ ಹೋಟೆಲ್. ಆಗಾಗ್ಗೆ ತಂದೆಯವರ ಜತೆ ಬಂದಾಗ ಇಲ್ಲೇ ನಮ್ಮ ಠಿಕಾಣಿ. ಇದು ನಮ್ಮ ಮನೆಯ ವಿಸ್ತರಣೆಯೇ ಆಗಿ ಮಾಲೀಕರಿಂದ ಹಿಡಿದು ಎಲ್ಲರೂ ನಮ್ಮನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ಇಲ್ಲಿ ಎಂತೆಂಥಹ ಮಹನೀಯರುಗಳನ್ನು ಕಂಡೆ! ಮಲೆನಾಡಿನ ಶ್ರೀಮಂತರು; ಅಂದಿನ ವಿಧಾನಸಭೆ ಸದಸ್ಯರಾದ ನಿರಾಡಂಬರ ಶ್ವೇತ ವಸನಧಾರಿ ಬಿ.ಎಲ್. ಸುಬ್ಬಮ್ಮನವರು; ಸಿನಿಮಾ–ನಾಟಕ ರಂಗಗಳ ದಿಗ್ಗಜರಾದ ಬಿ.ಆರ್.ಪಂತುಲು, ಎಚ್.ಎಲ್. ಎನ್.ಸಿಂಹ, ಪಿಟೀಲು ಚೌಡಯ್ಯನವರು, ಇನ್ನೂ ಮುಂತಾದ ನಮ್ಮ ತಂದೆಯವರ ಆತ್ಮೀಯರು ಕಾಣಸಿಗುತ್ತಿದ್ದರು. ಆಗಿನ ದಿನಗಳಲ್ಲಿ ಬೇಸಿಗೆಯಲ್ಲಿ ಕುದುರೆ ರೇಸ್ ನಡೆಯುತ್ತಿತ್ತು. ಆ ರೇಸ್‌ಗಳಲ್ಲಿ ಕುದುರೆ ಓಡಿಸುವ ಜಾಕಿಗಳಾದ ಜಗದೀಶ್, ಕಾಡೆ ಮುಂತಾದವರು, ರೇಸಿಗೆ ಬೆಟ್ ಕಟ್ಟುವವರು, ಇವರಿಗೆ ಟಿಪ್ಸ್ ಕೊಡುವ ಟಿಪ್‌ಸ್ಟರ್ ಬಾಂಬೆಯ ಹಾಜಿ, ಜ್ಯೋತಿಷಿ, ಊದುಗಡ್ಡಿ ಮಾರುವವರು, ಹೀಗೆ ಎಲ್ಲರಿಗೂ ಅದು ಆಶ್ರಯ ತಾಣವಾಗಿತ್ತು. ಸರಳ, ಸ್ನೇಹಮಯಿ ಟಿಪ್‌ಸ್ಟರ್ ಹಾಜಿಯವರ ಫೋಟೊ ರೇಸ್ ನಡೆವ ಶನಿವಾರ, ಭಾನುವಾರ ಡೆಕನ್ ಹೆರಾಲ್ ಕೊನೆ ಪುಟದಲಿ ಇರುತಿತು!

ಈ ಹೋಟೆಲ್‌ಗೆ ಸಮೀಪದಲ್ಲೇ ಇದ್ದ ರೇಸ್ ಕೋರ್ಸ್‌ಗೆ ರೇಸ್ ನೋಡಲು ನಾವೆಲ್ಲ ತಂದೆಯವರೊಡನೆ ಹೋಗುತ್ತಿದ್ದೆವು. ಕುದುರೆ ರೇಸೆಂದರೆ ಏನೆಂದು ಅರಿಯದ ಮಕ್ಕಳಾಗಿದ್ದ ನಾವು ಜಾಕಿಗಳು ಹಿಂಭಾಗವನ್ನೆತ್ತಿ ಕುದುರೆಗಳನ್ನು ಓಡಿಸುವುದು, ಕೂಲಿಂಗ್ ಗ್ಲಾಸ್ ಧರಿಸಿದ ರಮಣಿಯರು ‘ಕಮಾನ್… ಕಮಾನ್!’ ಎಂದು ಕೂಗುವುದನ್ನು ನೋಡುತ್ತಿದ್ದುದೇ ಒಂದು ಮಜಾ! ನಾನು ‘ಎಸ್ಸೆಸ್ಸೆಲ್ಸಿ’ ಓದುತ್ತಿದ್ದ ಸಮಯದಲ್ಲಿ ಮಾಡರ್ನ್ ಹಿಂದೂ ಹೋಟೆಲ್ ಡೈಮಂಡ್ ಜ್ಯೂಬಿಲಿ ಆಚರಿಸಿಕೊಂಡಿತು. ಮಾಡರ್ನ್ ಹೋಟೆಲ್ ಕಟ್ಟಡಕ್ಕೆ ಪ್ಲಾನ್ ಹಾಕಿದ ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಡಿವಿಜಿಯವರು ಮಾಲೀಕ ಅಪ್ಪಣ್ಣನವರೊಡನೆ ಸಮಾರಂಭದಲ್ಲಿ ಕುಳಿತಿದ್ದ ಚಿತ್ರ ಕಣ್ಣಿಗೆ ಕಟ್ಟಿದಂತಿದೆ.

ಸುಮಾರು 70–80 ವರ್ಷಗಳ ಹಿಂದೆ ಬೆಂಗಳೂರಿನ ‘ಸೆಂಟ್ರಲ್ ಜೈಲು’ ಶೇಷಾದ್ರಿ ರೋಡಿನಲ್ಲಿ, ಮಹಾರಾಣಿ ಕಾಲೇಜಿನ ಪಕ್ಕಕ್ಕೆ ಅಭಿಮುಖವಾಗಿತ್ತು. ನಮ್ಮ ಬಾಲ್ಯದಲ್ಲಿ ಈ ಜೈಲಿನ ಪರಿವೆಯೇ ನಮಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಆರು ತಿಂಗಳು ಸಜಾ ಅನುಭವಿಸಬೇಕಾದ ಸಂದರ್ಭದಲ್ಲಿ ನನ್ನ ಚಿಕ್ಕ ಮಾವನವರು ಅಂದಿನ ಸೆಂಟ್ರಲ್ ಜೈಲ್ ಅನುಭವದ ಬಗ್ಗೆ ಹೇಳಿದ್ದರು. ಶಿಕ್ಷೆ ಅನುಭವಿಸಬೇಕಾದವರು ಜೈಲಿನಲ್ಲಿ ಯಾವುದಾದರೂ ಕೆಲಸ ಕಡ್ಡಾಯವಾಗಿ ಮಾಡಬೇಕಾಗಿತ್ತಂತೆ. ಮಾವನವರು ಭಂಗಿ ಕೆಲಸ ಆಯ್ದುಕೊಂಡರಂತೆ. ಜೈಲಿನ ಮಧ್ಯೆ ಒಂದು ಕಾವಲು ಗೋಪುರ. ಕೈದಿಗಳೇನಾದರೂ ದಂಗೆ ಎದ್ದ ರೀತಿ ಗಲಾಟೆ ಪ್ರಾರಂಭಿಸಿದರೆ, ಗೋಪುರದಿಂದ ಸೈರನ್ ಮೊಳಗುತ್ತಿತ್ತು. ಆಗ ರಿಸರ್ವ್ ಪೊಲೀಸ್ ಬಂದು ಗಲಾಟೆ ಮಾಡಿದ ಕೈದಿಗಳನ್ನು ಹಿಡಿದು ಚಚ್ಚುತ್ತಿದ್ದರಂತೆ. ಎಷ್ಟೋ ಜನಕ್ಕೆ ಪ್ರಾಣಾಂತಿಕ ಏಟುಗಳು ಬೀಳುತ್ತಿದ್ದವಂತೆ. ಇಲ್ಲಿನ ಕೈದಿಗಳೇ ದುಡಿದು ಬೆಂಗಳೂರಿಗೆ ನೀರು ಸರಬರಾಜಾಗುತ್ತಿರುವ ತಿಪ್ಪಗೊಂಡನಹಳ್ಳಿಯ ಕೆರೆಯನು ಕಟಿದು.

ನಮ್ಮ ಹೆವನ್ಲಿ ಅಬೋಡ್ ಹೋಟೆಲ್‌ನ ಪಕ್ಕದಲ್ಲೇ ಚಿತ್ರನಗರಿ ಗಾಂಧೀನಗರ ಮತ್ತು ಚಿತ್ರಮಂದಿರಗಳ ಆಗರ ಮೆಜೆಸ್ಟಿಕ್. ಹೋಟೆಲ್‌ನಿಂದ ಒಂದು ಕಲ್ಲೆಸೆತದ ದೂರದಲ್ಲಿ ಮೂವಿಲ್ಯಾಂಡ್ ಥಿಯೇಟರ್, ಕೊಂಚ ಮುಂದೆ ಹೋದರೆ ಹಳೆಯ ಮೆಜೆಸ್ಟಿಕ್ ಪ್ರಾಂಗಣ. ಇಲ್ಲಿ ಎಡಕ್ಕೆ ಹಿಮಾಲಯ. ಬಲಕ್ಕೆ ಗೀತಾ ಟಾಕೀಸ್. ಒಂದೆರಡು ಹೆಜ್ಜೆ ಮುಂದಕ್ಕೆ ಮೆಜೆಸ್ಟಿಕ್ ಥಿಯೇಟರ್. ಕೆಂಪೇಗೌಡ ರೋಡಿನಲ್ಲಿ ಸಾಗರ್, ಸ್ಟೇಟ್ಸ್, ಕೆಂಪೇಗೌಡ ಟಾಕೀಸ್, ಜೈಹಿಂದ್, ಅಲಂಕಾರ್ ಸಿನಿಮಾ ಮಂದಿರಗಳು. ಸಿಟಿ ಮಾರ್ಕೆಟ್ ವಲಯದಲ್ಲಿ ನಾಜ್, ಪ್ಯಾರಮೌಂಟ್, ಚಿಕ್ಕಪೇಟೆಯಲ್ಲಿ ವಿಜಯಲಕ್ಷ್ಮಿ, ಶಿವಾಜಿ, ಶಾರದಾ, ಇತ್ಯಾದಿ. ಕಂಟೋನ್ಮೆಂಟ್‌ನಲ್ಲಿ ಇಂಗ್ಲಿಷ್ ಚಿತ್ರಗಳಿಗೆ ಮೀಸಲಾದ ಬಿ.ಆರ್.ವಿ., ಲಿಬರ್ಟಿ, ಪ್ಲಾಜ, ಇಂಪೀರಿಯಲ್, ರೆಕ್ಸ್ ಮುಂತಾದವು. ಇನ್ನೂ ದೂರದ ಬಡಾವಣೆಗಳಲ್ಲಿ ಅದೆಷ್ಟೋ ಚಿತ್ರಮಂದಿರಗಳು. ಚಿತ್ರನಗರಿ ಎಂಬ ಹೆಸರು ಬೆಂಗಳೂರಿಗೆ ಅನ್ವರ್ಥವಾಗಿತ್ತು. ಕಾಲಕ್ರಮೇಣ ಪ್ರತಿ ಭಾನುವಾರ ಆಕಾಶವಾಣಿಯಲ್ಲಿ ಚಿತ್ರಗಳ ಸೌಂಡ್ ಟ್ರ್ಯಾಕ್ ಕೇಳುವ ಕಾರ್ಯಕ್ರಮ ಪ್ರಾರಂಭವಾಯ್ತು. ಕ್ರಮೇಣ ಟಿ.ವಿ. ಬಂದಿತು. ನಂತರ ಮೊಬೈಲ್, ಕ್ರಮೇಣ ಜನ ಮನೆ ಮತ್ತು ಟಿ.ವಿ.ಗೆ ಸೀಮಿತರಾದರು. ಸಿನಿಮಾ ಮಂದಿರಗಳ ಜನಪ್ರಿಯತೆ ಕುಗ್ಗತೊಡಗಿತು.

ಅಂದಿನ ಪ್ರಸಿದ್ಧ ಚಿತ್ರ ನಿರ್ಮಾಪಕರೂ ನಟರೂ ಆಗಿದ್ದ ಬಿ.ಆರ್. ಪಂತುಲುರವರು ಒಂದು ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದರು. ಪಂತುಲುರವರು ‘ಮಕ್ಕಳ ರಾಜ್ಯ’ ಎಂಬ ಆಕರ್ಷಕ ಮಕ್ಕಳ ಚಿತ್ರ ತಯಾರಿಸಿ ಬೆಂಗಳೂರಿನ ಗೀತಾ ಟಾಕೀಸಿನಲ್ಲಿ ಆ ಚಿತ್ರದ ‘ಪ್ರಿವ್ಯೂ’ ಎಂಬ ಸಮಾರಂಭ ಏರ್ಪಡಿಸಿ, ಆಹ್ವಾನಿತರಿಗೆ ಆ ಚಿತ್ರ ತೋರಿಸಿದರು. ಪಂತುಲು ಅವರ ಸ್ನೇಹಿತರಾಗಿದ್ದ ತಮಿಳಿನ ಹೆಸರಾಂತ ನಟ ಶಿವಾಜಿ ಗಣೇಶನ್‌ರು ಅಂದು ಅಧ್ಯಕ್ಷತೆ ವಹಿಸಿದ್ದರು. ಮತ್ತು ಆ ಚಿತ್ರದಲ್ಲಿ ಒಂದು ಚಿಕ ಪಾತ್ರವನೂ ವಹಿಸಿದರು. ಇದೇ ರೀತಿ

ಎಂಬತ್ತರ ನೆನಪು: ಬೆಂಗಳೂರಿನ ಲಾಲ್‌ಬಾಗ್ ಬಳಿಯ ಟಾಂಗಾ ಸ್ಟಾಂಡ್ ಸುಧಾ ಆರ್ಕೈವ್ಸ್: ಟಿ.ಎಲ್. ರಾಮಸ್ವಾಮಿ

